ರೂ. 7.60 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಸಂಸದರ ನಿಧಿಯಿಂದ ರೂ.5.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಸಂಸದರ ನಿಧಿಯಿಂದ ರೂ.5.00 ಲಕ್ಷಗಳು ಬಿಡುಗಡೆಗೊಂಡಿದೆ. ಒಟ್ಟು ರೂ.12.60 ಲಕ್ಷ ಒದಗಿಸಿದೆ. ಈವರೆವಿಗೆ ರೂ.5.00ಲಕ್ಷ ವೆಚ್ಚ ಮಾಡಿ ಪಿಡಬ್ಲ್ಯೂಡಿ ಇಲಾಖೆ ಮೂಲಕ ಮೈದಾನ ಸಮತಟ್ಟು ಒಡ್ಡು ನಿರ್ಮಾಣ ಮಾಡಲಾಗಿದೆ. ಪ್ರಸ್ತುತ ಈ ಯೋಜನೆ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

4865(5515) ಶ್ರೀ ಸೋಮಲಿಂಗಪ್ಪ ಎಂ.ಎಸ್. (ಸಿರಗುಪ್ಪ): ಮಾನ್ಯ ಅಲ್ಪಸಂಖ್ಯಾತ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕರ್ನಾಟಕ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ನಿಗಮದ ವತಿಯಿಂದ ಹಮ್ಮಿಕೊಂಡಿರುವ ಅಭಿವೃದ್ಧಿ ಕಾರ್ಯಗಳು ಯಾವುವು;

ಆ) ಶಿರಗುಪ್ಪ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಮತ್ತು ಮಂಜೂರು ಮಾಡಿರುವ ಹಣವೆಷ್ಟು;

ಇ) ಕ್ಷೇತ್ರದಲ್ಲಿ ಈ ಹಣದಿಂದ ಹಮ್ಮಿಕೊಂಡಿರುವ ಕಾರ್ಯ ಕ್ರಮಗಳಾವುವು;

ಈ) ಶಿರಗುಪ್ಪ ಮತ ಕ್ಷೇತ್ರದಲ್ಲಿ ಕಳೆದ ಮೂರು ವರ್ಷದಲ್ಲಿ ಎಷ್ಟು ಜನ ಇದರ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?(ಪ್ರತಿ ವರ್ಷದ ವಿವರಗಳನ್ನು ನೀಡುವುದು).

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು):

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಯೋಜನೆಗಳನ್ನು ರಾಜ್ಯದ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

1. ಸ್ವಾವಲಂಬನ ಮಾರ್ಜಿನ ಹಣ ಸಾಲದ ಯೋಜನೆ.
2. ಸಹಾಯಧನ ಯೋಜನೆ.
3. ನೇರ ಸಾಲದ ಯೋಜನೆ.
4. ತರಬೇತಿ ಕಾರ್ಯಕ್ರಮಗಳು.
5. ಗಂಗಾ ಕಲ್ಯಾಣ ಯೋಜನೆ.
6. ಅರಿವು ಯೋಜನೆ.

ಆ) ಶಿರಗುಪ್ಪ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ರೂ.12.50 ಲಕ್ಷಗಳ ಗುರಿಯನ್ನು ನಿಗದಿಪಡಿಸಲಾಗಿತ್ತು. ಇದರಲ್ಲಿ ರೂ.12.71 ಲಕ್ಷಗಳ ಗುರಿಯನ್ನು ಸಾಧಿಸಲಾಗಿದೆ.

ಇ) ಈ ಹಣದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ.

1. ಸ್ವಾವಲಂಬನ ಮಾರ್ಜಿನ ಹಣ ಸಾಲದ ಯೋಜನೆ.
2. ಸಹಾಯಧನ ಯೋಜನೆ.
3. ನೇರ ಸಾಲದ ಯೋಜನೆ.
4. ತರಬೇತಿ ಕಾರ್ಯಕ್ರಮಗಳು.
5. ಗಂಗಾ ಕಲ್ಯಾಣ ಯೋಜನೆ.
6. ಅರಿವು ಯೋಜನೆ.

ಈ) 2002–03, 2003–04 ಹಾಗೂ 2004–05ನೇ ಸಾಲಿನಲ್ಲಿ ನಿಗಮದಿಂದ ಹಮ್ಮಿಕೊಂಡ ಕಾರ್ಯಕ್ರಮಗಳು ಹಾಗೂ ಶಿರಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ವರದಿ;

ಯೋಜನೆ ಹೆಸರು	ಪ್ರಯೋಜನೆ ಪಡೆದ ಫಲಾನುಭವಿಗಳ ಸಂಖ್ಯೆ		
	2002–03	2003–04	2004–05
1. ಗಂಗಾ ಕಲ್ಯಾಣ ಯೋಜನೆ	02	03	02
2. ಸ್ವಾವಲಂಬನಾ ಸಾಲ	07	34	23
3. ನೇರ ಸಾಲಯೋಜನೆ	–	–	12
4. ಅರಿವು ಯೋಜನೆ	01	01	02
5. ವಾಹನ ಚಾಲನೆ	01	03	–
ಒಟ್ಟ	11	40	39

4866(5652) ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಅಬಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾಗಿರುವ ತೆರಿಗೆ ಬಾಕಿ ಹಣ ಎಷ್ಟು;